

‘ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದ ಕಣಗಾಲ್ ಗ್ರಾಮ ಕನ್ನಡದ ಚಲನಚಿತ್ರ ನಿರ್ದೇಶಕ ಪುಟ್ಟಣ್ಣ ಕಣಗಾಲರ ಹೆಸರಿನಿಂದಾಗಿ ಜನಪ್ರಿಯವಾಗಿತ್ತು. 2015 ಅಕ್ಟೋಬರ್ 1ರಂದು ಅದು ಇದ್ದಕ್ಕಿದ್ದಂತೆ ಜಗತ್ಪ್ರಸಿದ್ಧಿಯನ್ನು ಪಡೆಯಿತು. ಇಡೀ ದೇಶದಲ್ಲೇ ನಡೆದಿರದ ಒಂದು ವಿಸ್ಮಯ ಅಲ್ಲಿ ನಡೆದಿತ್ತು. ಅಂದು ಮಧ್ಯಾಹ್ನ 2 ಗಂಟೆ ಹೊತ್ತಿಗೆ ಸುತ್ತಲೂ ಫಳಫಳ ಮಿಂಚುವ ಬೆಳಕುಳ್ಳ ಬಾಹ್ಯಾಕಾಶ ನೌಕೆಯೊಂದು ಮೋಡಗಳ ಹಿಂದಿನಿಂದ ಪ್ರತ್ಯಕ್ಷವಾಯಿತು. ಅದರಿಂದ ಕಿತ್ತಳೆ ಬಣ್ಣದ ಉಡುಪನ್ನು ತೊಟ್ಟಿದ್ದ, ಹಿಂದೆಂದೂ ಕಂಡಿರದ, ಮಾನವ ಆಕಾರದ ಅನ್ಯಲೋಕ ಜೀವಿಯೊಂದು ತಮ್ಮ ಕಡೆ ನಡೆದು ಬಂದು ತಮ್ಮ ಕೆಲವು ಫೋಟೋಗಳನ್ನು ತೆಗೆದುಕೊಂಡು ಹಾರಿ ಹೋಗಿದ್ದನ್ನು ಏಳು ಜನ ಹೆಂಗಸರು ಕಣ್ಣಾರೆ ನೋಡಿದ್ದರು.’

—ಇದು ನಾನು ಹೇಳಿದ್ದಲ್ಲ. ದೃಶ್ಯಮಾಧ್ಯಮಗಳು ಹೇಳಿದ್ದು. ಅಲ್ಲಿ ನಡೆದಿದ್ದೇನು ಅಂತ ಈಗಲೂ ನಮಗೆ ಗೊತ್ತಿಲ್ಲ. ಏಕೆಂದರೆ ಟಿವಿ ವಾಹಿನಿಗಳು ಇದನ್ನಿಟ್ಟುಕೊಂಡು ಮೂರು ದಿನ ಟಿಆರ್‌ಪಿ ಕೊಳ್ಳೆ ಹೊಡೆದ ನಂತರ ಇದರ ಕುರಿತು ಮುಂದುವರಿದ ಸಂಶೋಧನೆ ಮಾಡುವ ಗೋಜಿಗೆ ಯಾರೂ ಹೋಗಿಲ್ಲ. ಸುದ್ದಿಯು ಪ್ರತ್ಯಕ್ಷದರ್ಶಿಗಳಾದ ಕೃಷಿಕಾರ್ಮಿಕ ಮಹಿಳೆಯರಿಂದ ಶುರುವಾಗಿ ಮಾಂತ್ರಿಕ ಮಾಧ್ಯಮಗಳ ಮೂಲಕ ವಿಸ್ತರಿಸಿತು. ಇದರ ಕುರಿತು ಯಾವುದೇ ವೈಜ್ಞಾನಿಕ ವಿವರ ಕೊಡಲು ಅರ್ಹರಲ್ಲದವರೇ ಹೆಚ್ಚು ಭಾಗವಹಿಸಿದ ಸಂವಾದಗಳು ನಡೆದವು. ಇದು ಹೇಗೆ ಪುಂಖಾನುಪುಂಖವಾಗಿ ಬೆಳೆಯಿತು, ಬಾಯಿಂದ ಬಾಯಿಗೆ ದಾಟುತ್ತಾ ಹೇಗೆ ಹೊಸ ಹೊಸ ವಿವರಗಳು ಸೇರಿಕೊಂಡವು ಎಂಬುದನ್ನು ನಾವು ಆ ಎರಡು ಮೂರು ದಿನಗಳಲ್ಲಿ ಹಲವು ಟಿವಿ ಚಾನೆಲ್‌ಗಳು ಬಿತ್ತರಿಸಿದ ಸುದ್ದಿ, ಸಂವಾದಗಳನ್ನು ಹೋಲಿಸಿ ನೋಡಿದಾಗ ತಿಳಿಯುತ್ತದೆ.

ಇವರೆಲ್ಲಾ ಹೇಳೋದನ್ನ ನೋಡಿದ್ರೆ ನಾವು ಇದುವರೆಗೂ ಕಾಣದೇ ಇರುವಂಥ ಪ್ರಾಣಿನೋ, ಅನ್ಯಗ್ರಹ ಜೀವಿನೋ ಅಲ್ಲಿ ಕಾಣಿಸಿಕೊಂಡಿರೋದಂತೂ ಸತ್ಯ. ಈ ತರಹ ಅಲ್ಲಲ್ಲಿ ನಡೆದ ಉದಾಹರಣೆಗಳೂ ಇವೆ. ‘ಹಾಗಾದ್ರೆ, ಇದು ಏಲಿಯನ್ನೇ (ಅನ್ಯಗ್ರಹ ಜೀವಿ) ಆಗಿರಬಹುದು. ನಾವು ಕೋತಿ ಮಂಗಗಳನ್ನು ಇಟ್ಕೊಂಡು ಹೇಗೆ ಪ್ರಯೋಗ ಮಾಡ್ತೀವೋ ಹಾಗೆ ಅವರೂ ಈ ಗ್ರಹದ ಮನುಷ್ಯರನ್ನು ಎತ್ಕೊಂಡು ಹೋಗಿ ಅವರ ಪ್ರಯೋಗಾಲಯದಲ್ಲಿ ಇಟ್ಕೊಂಡು ಪ್ರಯೋಗ ಮಾಡ್ತಾರಂತೆ ಅಂತನ್ನೋ ಕಲ್ಪನೆ ಇದೆ’ ಎಂಬ ಘನವಾದ ತೀರ್ಪನ್ನು ಕೊಟ್ಟ ಒಂದು ವಾಹಿನಿಯ ನಿರೂಪಕಿ ಮತ್ತು ಇಡೀ ಚರ್ಚೆ ನಡೆಯುವ ಹೊತ್ತಿನಲ್ಲಿ ಏಲಿಯನ್‌ಗಳ ಕುರಿತ ಯಾವುಯಾವುದೋ ಸಿನಿಮಾಗಳಿಂದ ಕದ್ದ ದೃಶ್ಯಾವಳಿಗಳನ್ನು ತೆರೆಯ ಮೇಲಿನ ಒಂದು ಭಾಗದಲ್ಲಿ ನಿರಂತರವಾಗಿ ತೋರಿಸಿದ್ದು, ಅವೆಲ್ಲವೂ ಸೈನ್ಸ್ ಫಿಕ್ಷನ್‌ಗಳ ತುಣುಕುಗಳು ಎನ್ನುವ ಸೂಚನೆಯನ್ನೂ ವೀಕ್ಷಕರಿಗೆ ಕೊಡದೇ ಇದ್ದದ್ದು– ಮಾಧ್ಯಮಗಳ ಇಂಥ ಅನೇಕ ಬಗೆಯ ಹೊಣೆಗೇಡಿ ವರ್ತನೆಗಳಿಂದಾಗಿ ಭೂಮಿಯನ್ನು ಬಿಟ್ಟು ಬೇರೆ ಕಡೆ ಜೀವ ಇರಬಹುದೇ ಎನ್ನುವ ಜಿಜ್ಞಾಸೆ ಸಾರ್ವಜನಿಕವಾಗಿ ಹಾದಿ ತಪ್ಪಿದೆ. ಇಲ್ಲಿ ವಿಜ್ಞಾನಕ್ಕಿಂತ ಅಜ್ಜಿಕಥೆಯೇ ಹೆಚ್ಚಾಗಿ ಮೆರೆದಿದೆ.

## ಇನ್ನೂ ಮೂರು ಭೂಮಿಗಳು!

ವಿಜ್ಞಾನ ವಲಯದಲ್ಲಿ ಭೂಮಿ ಬಿಟ್ಟು ವಿಶ್ವದಲ್ಲಿ ಬೇರೆ ಕಡೆ ಇರಬಹುದಾದ ಜೀವದ ಕುರುಹನ್ನು ಹುಡುಕುವ ಪ್ರಯತ್ನ ಹಗಲು ರಾತ್ರಿ ನಡೆದಿದೆ. ಆದರೆ ಸಾರ್ವಜನಿಕರಲ್ಲಿ ಈ ಕುರಿತು ಮತ್ತೊಮ್ಮೆ ಕುತೂಹಲದ ಅಲೆಯನ್ನು ಎಬ್ಬಿಸಿದ್ದು ಎಂದರೆ ಇತ್ತೀಚೆಗೆ ಪತ್ತೆಯಾದ ಭೂಸದೃಶ ಗ್ರಹಗಳ ಸುದ್ದಿ. ಸುಮಾರು 40 ಜ್ಯೋತಿರ್ವರ್ಷ ದೂರದಲ್ಲಿ ಗುರುತಿಸಲಾದ ಈ ನಕ್ಷತ್ರವ್ಯೂಹಕ್ಕೆ ಟ್ರಾಪಿಸ್ಟ್–1 ಎಂದು ಹೆಸರಿಡಲಾಯಿತು (ಜ್ಯೋತಿರ್ವರ್ಷ ಎಂದರೆ ಬೆಳಕು ಒಂದು ವರ್ಷದಲ್ಲಿ ಪಯಣಿಸುವ ದೂರ). ಟ್ರಾಪಿಸ್ಟ್–1 ಸುತ್ತ ಪರಿಭ್ರಮಿಸುವ ಮೂರು ಗ್ರಹಗಳನ್ನು ಹೋದ ವರ್ಷವೇ ಪತ್ತೆ ಹಚ್ಚಲಾಗಿತ್ತು.

ನಾಸಾದ ಸ್ಪಿಜರ್ ಸ್ಪೇಸ್ ಟೆಲಿಸ್ಕೋಪ್ ಮತ್ತು ಭೂಮಿಯ ಮೇಲೆ